ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101

RaithaBhavana, General Cariappa Circle, Gadag – 582 101

E-mail: ksrdpruadmissions@gmail.com Phone: 08372-230338, Fax: 08372-297343

News about Celebration of World Environment Day at of KSRDPR University is published in various Kannada Daily Newspaper Date:08.06.2021

# ಸಸಿ ನೆಟ್ಟು ಪರಿಸರ ದಿನಾಚರಣೆ



**ಗದಗ:** ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವತಿಯಿಂದ ನಾಗಾವಿ ಹತ್ತಿರ ನಿರ್ಮಾಣಗೊಳ್ಳುತ್ತಿರುವ ನೂತನ ವಿವಿ ಆವರಣದಲ್ಲಿ ಪರಿಸರ ದಿನಾಚರಣೆ ಜರುಗಿತು.

ಕಾರ್ಯಕ್ರಮಕ್ಕೆ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ಹಾಗೂ ಕುಲಸಚಿವ ಪ್ರೊ. ಬಸವರಾಜ್ ಲಕ್ಕಣ್ಣವರ್ ಚಾಲನೆನೀಡಿದರು. ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ, ಸಮಗ್ರ ಪಶು ಕೃಷಿ ಯೋಜನೆ, ಸ್ಮೃತಿ ವನ, ಸಬರಮತಿ ಆಶ್ರಮ, ರೂರಲ್ ಟೆಕ್ನಾಲಜಿ ಪಾರ್ಕ್, ಜೀವವೈವಿಧ್ಯ ಕೇಂದ್ರ, ತರಬೇತಿ ಕೇಂದ್ರ, ನೆರಳು, ಭೋಜನ ಶಾಲೆಯ ಆವರಣ ಹಾಗೂ ದೇಸಿ ಯೋಜನೆಯ ಭೂಮಿಯಲ್ಲಿ ಸುಮಾರು 500 ಗಿಡಗಳನ್ನು ನೆಡಲಾಯಿತು. ಜತೆಗೆ ವಿವಿಯಿಂದ ವಿದ್ಯಾರ್ಥಿಗಳು ತಾವಿರುವ ಕ್ಷೇತ್ರದಲ್ಲಿ ಸಸಿಯನ್ನು ನೆಟ್ಟು ವಿಶ್ವವಿದ್ಯಾಲಯದೊಂದಿಗೆ ಆ ಸೆಲ್ಫಿಯನ್ನು ಹಂಚಿಕೊಳ್ಳುವ ನನ್ನ ಗಿಡ ನನ್ನ ಉಸಿರು ಎಂಬ ವಿನೂತನ ಅಭಿಯಾನ ಆಯೋಜಿಸಿತ್ತು. ವಿಶ್ವವಿದ್ಯಾಲಯದಿಂದ ಕರೆಗೆ ಸ್ಪಂದಿಸಿದ ವಿಶ್ವವಿದ್ಯಾಲಯದ ನೂರಾರು ವಿದ್ಯಾರ್ಥಿಗಳು ಗಿಡನೆಟ್ಟು ತಾವು ನೆಟ್ಟ ಗಿಡದ ಜೊತೆಗೆ ಸೆಲ್ಫಿ ಕ್ಲಿಕ್ಕಿಸಿ ವಿಶ್ವವಿದ್ಯಾಲಯದೊಂದಿಗೆ ಹಂಚಿಕೊಂಡರು.

# ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದಲ್ಲಿ ಪರಿಸರ ದಿನಾಚರಣೆ

ಗದಗ: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವತಿಯಿಂದ ನಾಗಾವಿ ಹತ್ತಿರದ ಗುಡ್ಡ ಗಾಡು ಪ್ರದೇಶದಲ್ಲಿ ನಿರ್ಮಿತವಾಗಿರುವ ನೂತನ ಕ್ಯಾಂಪಸ್‌ನಲ್ಲಿ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಇಡೀ ಕ್ಯಾಂಪಸ್‌ನ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ, ಸಮಗ್ರ ಪಶು ಕೃಷಿ ಯೋಜನೆ, ಸ್ಮೃತಿ ವನ, ಸಬರಮತಿ ಆಶ್ರಮ, ರೂರಲ್ ಟೆಕ್ನಾಲಜಿ ಪಾರ್ಕ್, ಜೀವವೈವಿಧ್ಯ ಕೇಂದ್ರ, ತರಬೇತಿ ಕೇಂದ್ರ, ನೆರಳು, ಭೋಜನ ಶಾಲೆಯ ಆವರಣ ಹಾಗೂ ದೇಸಿ ಯೋಜನೆಯ ಭೂಮಿ ತಾಣಗಳಲ್ಲಿ ವಿಶ್ವವಿದ್ಯಾಲಯದ ಒಟ್ಟು 100 ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ವರ್ಗದವರು ಏಕಕಾಲದಲ್ಲಿ ಸುಮಾರು 500 ಗಿಡಗಳನ್ನು ನೆಡುವ ಮೂಲಕ ಹತ್ತು ಸಾವಿರ ಗಿಡಗಳನ್ನು ನೆಡುವ ಮುಂದಿನ ಕೆಲವು ದಿನಗಳ ವರೆಗೆ ನಡೆಯಲಿರುವ ?ಗ್ರೀನ್ ಕ್ಯಾಂಪಸ್ ಇನಿಷಿಯೇಟಿವ್? ಎಂಬ ಹಚ್ಚುಹಸಿರ ಕ್ಯಾಂಪಸ್ ನಿರ್ಮಿಸುವ ಕಾರ್ಯಕ್ಕೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ಹಾಗೂ ಕುಲಸಚಿವ ಪ್ರೊ. ಬಸವರಾಜ್ ಲಕ್ಕಣ್ಣವರ ಚಾಲನೆ ನೀಡಿದರು.

